ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

# Bangalore Electricity Supply Company Limited

ಮು.ಪ್ರ.ವ್ಯ.(ನಿ.ವ್ಯ)ರವರ ಕಛೇರಿ
ಕಂಪನಿ ಕಾರ್ಯಾಲಯ,
ಬೆ.ವಿ.ಕಂ. ಕೆ.ಆರ್.ವೃತ್ತ,
ಬೆಂಗಳೂರು-560001

## ಸುತ್ತೋಲೆ

ವಿಷಯ: ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್(5)ರಂತೆ ಬೆ.ವಿ.ಕಂ.ನ ಕಛೇರಿಗಳಲ್ಲಿರುವ ಮಾಹಿತಿ ಅಧಿಕಾರಿಗಳನ್ನು ಮರು ನೇಮಿಸುವ ಕುರಿತು.

ಉಲ್ಲೇಖ: 1. ದಿನಾಂಕ: 26.02.2013ರ ಮುಕ್ತ ಆಡಳಿತ ಸಭೆಯ ನಡಾವಳಿ
2. ದಿನಾಂಕ: 06.03.2013ರ ಮುಕ್ತ ಆಡಳಿತ ಸಭೆಯ ನಡಾವಳಿ

**ಪ್ರಸ್ತಾವನೆ:**

ದಿನಾಂಕ 26.02.2013ರ ಮುಕ್ತ ಆಡಳಿತ ಸಭೆಯಲ್ಲಿ ಕಂಪನಿ ಕಛೇರಿಯ ವಿವಿಧ ಶಾಖೆಗಳು, ವಲಯ ಕಛೇರಿಗಳು, ಹಾಗೂ ವೃತ್ತ ಕಛೇರಿಗಳಿಗೆ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ (5)ರಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, ಹಾಗೂ ಮೊದಲ ಮೇಲ್ಮನವಿ ಪ್ರಾಧಿಕಾರಿಗಳನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಮರು ನೇಮಿಸಲು ನಿರ್ಧಿಷ್ಟ ಪದ್ಧತಿ ಅನುಸರಿಸುವಂತೆ ನಿರ್ಧರಿಸಲಾಯಿತು. ಅದರಂತೆ ನಿಗಮ ಕಛೇರಿಯ ಶಾಖೆಗಳು, ವಲಯ ಕಛೇರಿಗಳು, ವೃತ್ತ ಕಛೇರಿಗಳಿಗೆ ಅನ್ವಯಿಸುವಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೊದಲ ಮೇಲ್ಮನವಿ ಪ್ರಾಧಿಕಾರಿಗಳನ್ನು ಮಾರ್ಪಡಿಸಿ ನೇಮಿಸುವಂತೆ ಸೂಚಿಸಿ ಸುತ್ತೋಲೆಯನ್ನು ಹೊರಡಿಸಲು ಉಲ್ಲೇಖ 2ರ ಸಭೆಯಲ್ಲಿ ನಿರ್ಣಯಿಸಲಾಗಿದೆ. ಅದರಂತೆ, ಮಾಹಿತಿ ಅಧಿಕಾರಿಗಳ ಮರು ನೇಮಕಾತಿ ಕುರಿತು ಅನುಸರಿಸಬೇಕಾದ ಕ್ರಮದ ಬಗ್ಗೆ ಅಧಿಕೃತ ಜ್ಞಾಪನ ಪತ್ರವನ್ನು ಆಯಾ ಕಛೇರಿಯಿಂದ ಹೊರಡಿಸಲು ಈ ಸುತ್ತೋಲೆ.

**ಸಂಖ್ಯೆ: ಬೆ.ವಿ.ಕಂ/ಬಿಸಿ-9/ಮು.ಪ್ರ.ವ್ಯ(ನಿ.ವ್ಯ)/ಉ.ಪ್ರ.ವ್ಯ(ಮಾ.ಹ)/**
**ಕ-1(6)/2012-13/ಸಿವೈಎಸ್-** 7342 **ದಿನಾಂಕ-** 13-03-2013

ಬೆ.ವಿ.ಕಂ.ನ ವಿವಿಧ ಕಛೇರಿಗಳಿಗೆ ಆಯಾ ಕಛೇರಿ ಮುಖ್ಯಸ್ಥರು ಕೆಳಕಂಡ ನಿರ್ಧಿಷ್ಟ ಪದ್ಧತಿ ಅನುಸರಿಸಿ ಮಾಹಿತಿ ಹಕ್ಕು ಅಧಿನಿಯಮ 2005ರ ಸೆಕ್ಷನ್ (5)ರಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ, ಹಾಗೂ ಮೊದಲ ಮೇಲ್ಮನವಿ ಪ್ರಾಧಿಕಾರಿಗಳನ್ನು ಮರು ನೇಮಿಸಲು ಈ ಕೆಳಗೆ ಸೂಚಿಸಿರುವ ಅನುಕ್ರಮದಂತೆ ಅವರ ಹೆಸರು, ಹುದ್ದೆ, ಸಂಚಾರಿ ದೂರವಾಣಿ ಸಂಖ್ಯೆ, ಸ್ಥಿರ ದೂರವಾಣಿ ಸಂಖ್ಯೆಗಳ ವಿವರಗಳನ್ನೊಳಗೊಂಡ ಸೂಕ್ತ ಅಧಿಕೃತ ಜ್ಞಾಪನ ಪತ್ರವನ್ನು ಹೊರಡಿಸಲು ಸೂಚಿಸಿದೆ.

| ಕ್ರಮ ಸಂಖ್ಯೆ | ಕಛೇರಿ ವಿಳಾಸ | ಸಾರ್ವಜನಿಕ ಮಾಹಿತಿ ಅಧಿಕಾರಿ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಮೊದಲ ಮೇಲ್ಮನವಿ ಅಧಿಕಾರಿ |
|---|---|---|---|---|
| 1 | ಕಂಪನಿ ಕಛೇರಿಯ ವಿವಿಧ ಶಾಖೆಗಳು | ಉಪ ಪ್ರಧಾನ ವ್ಯವಸ್ಥಾಪಕರು | ಸಹಾಯಕ ಪ್ರಧಾನ ವ್ಯವಸ್ಥಾಪಕರು/ ವ್ಯವಸ್ಥಾಪಕರು | ಮುಖ್ಯ ಪ್ರಧಾನ ವ್ಯವಸ್ಥಾಪಕರು/ಪ್ರಧಾನ ವ್ಯವಸ್ಥಾಪಕರು |
| 2 | ವಲಯ ಕಛೇರಿಗಳು | ಅಧೀಕ್ಷಕ ಇಂಜಿನಿಯರ್(ವಿ), ವಲಯ ಕಛೇರಿ | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಲಯ ಕಛೇರಿ | ಮುಖ್ಯ ಇಂಜಿನಿಯರ್ (ವಿ), ವಲಯ ಕಛೇರಿ |
| 3 | ವೃತ್ತ ಕಛೇರಿ | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ | ಉಪ ಲೆಕ್ಕ ನಿಯಾಂತ್ರಣಾಧಿಕಾರಿ, ವೃತ್ತ ಕಛೇರಿ | ಅಧೀಕ್ಷಕ ಇಂಜಿನಿಯರ್(ವಿ), ವೃತ್ತ ಕಛೇರಿ |
| 4 | ವಿಭಾಗೀಯ ಕಛೇರಿ | ಕಾರ್ಯನಿರ್ವಾಹಕ ಇಂಜಿನಿಯರ್(ವಿ), | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ಕಛೇರಿ | ಅಧೀಕ್ಷಕ ಇಂಜಿನಿಯರ್(ವಿ), ಸಂಬಂಧಿತ ವೃತ್ತ ಕಛೇರಿ |
| 5 | ಉಪ ವಿಭಾಗೀಯ ಕಛೇರಿ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), | ಸಹಾಯಕ ಇಂಜಿನಿಯರ್(ತಾಂತ್ರಿಕ) | ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸಂಬಂಧಿತ ವಿಭಾಗ |

ಸದರಿ ಅಧಿಕೃತ ಜ್ಞಾಪನದ ಪ್ರತಿಯನ್ನು ಈ ಕಛೇರಿಗೆ ಕಳುಹಿಸುವುದರೊಂದಿಗೆ, ಸ್ಕ್ಯಾನ್ ಮಾಡಿದ ಪ್ರತಿಗಳನ್ನು bescomrti2005@gmail.com ಇ-ಮೇಲ್ ವಿಳಾಸಕ್ಕೆ ತಪ್ಪದೆ ದಿನಾಂಕ: 25.03.2013 ರೊಳಗೆ ಕಳುಹಿಸುವುದು.

12/3/13

ಮುಖ್ಯ ಪ್ರಧಾನ ವ್ಯವಸ್ಥಾಪಕರು
(ನಿಗಮ ವ್ಯವಹಾರ)

**ಪ್ರತಿಗಳು:**

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ), ನಿಗಮ ಕಾರ್ಯಾಲಯ, ಬೆ.ವಿ.ಕಂ, ಬೆಂಗಳೂರು.
2. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕಾ ಮತ್ತು ಪಾ ವಲಯಗಳು, ಬೆ.ವಿ.ಕಂ.
3. ಎಲ್ಲಾ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ), ನಿಗಮ ಕಾರ್ಯಾಲಯ, ಬೆ.ವಿ.ಕಂ, ಬೆಂಗಳೂರು.
4. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾ ಮತ್ತು ಪಾ ವಲಯಗಳು, ಬೆ.ವಿ.ಕಂ.
5. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಬೆ.ವಿ.ಕಂ.
6. ಪೊಲೀಸ್ ಅಧೀಕ್ಷಕರು, ಜಾಗೃತ ದಳ, ಬೆ.ವಿ.ಕಂ.
7. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರು(ವಿ) ಮತ್ತು (ಹ ಮತ್ತು ವಾ), ನಿಗಮ ಕಾರ್ಯಾಲಯ, ಬೆ.ವಿ.ಕಂ, ಬೆಂಗಳೂರು.
8. ಎಲ್ಲಾ ಕಾರ್ಯಾನಿರ್ವಾಹಾಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಬೆ.ವಿ.ಕಂ.
9. ಎಲ್ಲಾ ಸಹಾಯಕ ಕಾರ್ಯಾನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪ ವಿಭಾಗ, ಬೆ.ವಿ.ಕಂ.
10. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂ)/ಮು.ಪ್ರ.ವ್ಯ.(ಹ ಮತ್ತು ವಾ), ಬೆ.ವಿ.ಕಂ. ರವರ ಆಪ್ತ ಕಾರ್ಯಾದರ್ಶಿರವರುಗಳಿಗೆ.
11. ಬೆ.ವಿ.ಕಂ ಅಂತರ್ಜಾಲ
12. ಮಹಾ ಕಡತ